**ದಿನಾಂಕ:18-08-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್.ಯು.ಪಿ ವಕೀಲರಿಂದ:**

ದಾವಾ ಆಸ್ತಿಯಲ್ಲಿ ಚನ್ನಬಸಪ್ಪ ಮಡ್ಡಿಯವರೇ ಸಾಗುವಳಿ ಮಾಡುತ್ತಿದ್ದಾರೆ. ಶಾಂತವ್ವನವರು ತನಗೆ ಆರೋಗ್ಯ ಸರಿ ಇಲ್ಲದ ಕಾರಣ ಚನ್ನಬಸಪ್ಪ ಮಡ್ಡಿಯವರಿಗೆ ಕರಾರು ಪತ್ರ ಬರೆದುಕೊಟ್ಟು ರೂ.1,80,000/- ಗಳನ್ನು ಪಡೆದುಕೊಂಡಿದ್ದರು ಎನ್ನುವುದು ಸರಿ. ಆ ಕರಾರು ಪತ್ರದಲ್ಲಿ ಶಾಂತವ್ವ ರೂ.1,80,000/-ಗಳನ್ನು ವಾಪಸ್ಸು ಕೊಟ್ಟ ನಂತರ ದಾವಾ ಆಸ್ತಿಯನ್ನು ಬಿಟ್ಟುಕೊಡುವ ಬಗ್ಗೆ ಕರಾರಾಗಿತ್ತು ಎನ್ನುವುದು ಸರಿ. ಶಾಂತವ್ವ ನವರು ಬದುಕಿದ ಸಂದರ್ಭದಲ್ಲಿ ರೂ.1,80,000/- ಗಳನ್ನು ಚನ್ನಬಸಪ್ಪ ಮಡ್ಡಿ ಯವರಿಗೆ ವಾಪಸ್ಸು ಕೊಟ್ಟಿರಲಿಲ್ಲ ಎನ್ನುವುದು ಸರಿ. ಈಗಲೂ ಸಹ ದಾವಾ ಆಸ್ತಿಯಲ್ಲಿ ಚನ್ನಬಸಪ್ಪ ಮಡ್ಡಿಯವರೇ ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದು ಸರಿ. ಶಾಂತವ್ವನಿಗೆ ಯಾರೂ ಸಹ ವಾರಸುದಾರರು ಇರಲಿಲ್ಲ. ಅದೇ ರೀತಿ ಆ ಮೃತ್ಯು ಪತ್ರದಲ್ಲಿ ವಾದಿಗೆ ರೂ1,80,000/- ಗಳನ್ನು ಶಾಂತವ್ವ ವಾಪಸ್ಸು ಕೊಡಬೇಕು ಎಂಬುದಾಗಿ ಬರೆಯಲಾಗಿದೆ ಎನ್ನುವುದು ಸರಿ. ದಾವಾ ಆಸ್ತಿ ಶಾಂತವ್ವರವರಿಗೆ ನ್ಯಾಯಾಲಯದ ಡಿಕ್ರಿ ಮೂಲಕ ಬಂದತಂಹ ಆಸ್ತಿಯಾಗಿರುತ್ತದೆ. ಈಗಲೂ ಸಹ ವಾದಿಯರು ದೇವಸ್ಥಾನದ ಸಮೀತಿಯವರು ರೂ.1,80,000/- ಗಳನ್ನು ವಾಸಪ್ಪ ಕೊಟ್ಟರೆ ದಾವಾ ಆಸ್ತಿಯನ್ನು ಬಿಟ್ಟುಕೊಡಲು ಸಿದ್ಧರಿದ್ದಾರೆ ಎಂದರೆ ಸರಿ.

**:ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ.ಜಿ.ಎ.ಎನ್ ವಕೀಲರಿಂದ:**

(2 ನೇ ಪ್ರತಿವಾದಿ ಪರ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದರು, ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ